Good Relations India

CLIENT: Aurigo
PUBLICATION: **Indu Sanje**
EDITION Bangalore
DATE September 15, 2010
PAGE NO. 03

CIRCULATION: 46.000
READERSHIP: 2.30.000
NO OF EDITIONS: 06

aurigo

Aurigo establishes "Public Sector Practice" in India

Saurabh Bhardwaj appointed as Director - Public Sector (India)

ಸಾರ್ವಜನಿಕ ಕ್ಷೇತ್ರದ ಭಾರತೀಯ

ನಿರ್ದೇಶಕರಾಗಿ ಸೌರಭ್ ನೇಮಕ

ಬೆಂಗಳೂರು, ಸೆಪ್ಟೆಂಬರ್ 2010 :– ಮೂಲಸೌಕರ್ಯ ಸಂಸ್ಥೆಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು, ಸಾಮಾನ್ಯ ಗುತ್ತಿಗೆದಾರರು, ಪಿಎಂಸಿ ಸಂಸ್ಥೆಗಳು ಮತ್ತು ಬಂದರುಗಳಿಗೆ ವಿಶ್ವವ್ಯಾಪಿಯಾಗಿ ಕ್ಯಾಪಿಟಲ್ ಪ್ರಾಜೆಕ್ಟ್ ಮತ್ತು ಪ್ರೋಗ್ರಾಮ್ ಮ್ಯಾನೇಜ್‌ಮೆಂಟ್(ಸಿಪಿಎಂಎಸ್)ಗಾಗಿ ಪರಿಹಾರಗಳನ್ನು ಪೂರೈಸುತ್ತಿರುವ ಜಾಗತಿಕ ಮುಂಚೂಣಿಯ ಸಾಫ್ಟ್‌ವೇರ್ ಉತ್ಪನ್ನ ಸಂಸ್ಥೆಯಾದ ಆರಿಗೊ ಸಾಫ್ಟ್‌ವೇರ್ ಈಗ ಭಾರತದಲ್ಲಿ ಪ್ರತ್ಯೇಕವಾದ ಸಾರ್ವಜನಿಕ ಕ್ಷೇತ್ರದ ವ್ಯವಹಾರವನ್ನು ಸ್ಥಾಪಿಸಿರುವುದಾಗಿ ಪ್ರಕಟಿಸಿದೆ.

ಭಾರತದಲ್ಲಿ ಸಾರ್ವಜನಿಕ ಕ್ಷೇತ್ರ ವ್ಯವಹಾರದ ನಿರ್ದೇಶಕರಾಗಿ ಸೌರಭ್ ಭಾರದ್ವಾಜ್ ಅವರನ್ನು ನೇಮಿಸಲಾಗಿದ್ದು ಹೊಸದಿಲ್ಲಿಯಲ್ಲಿನ ಆರಿಗೊ ಕಚೇರಿಗಳಿಂದ ಕಾರ್ಯಾಚರಣೆ ನಡೆಸಲಿದ್ದಾರೆ. ಭಾರದ್ವಾಜ್ ಅವರು ಉದ್ಯಮಶೀಲ ತಂತ್ರಜ್ಞಾನ ಸಲಹಾಕಾರ ಕ್ಷೇತ್ರದ ಹಲವಾರು ವಿಭಾಗಗಳಲ್ಲಿ 10 ವರ್ಷಕ್ಕೂ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ. ವಿಮೆ, ದೂರಸಂಪರ್ಕ, ರೈಲ್ವೆ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಅವರು ಅನುಭವಿಯಾಗಿದ್ದಾರೆ. ಈ ಹಿಂದೆ ಅವರು ಸಿಐಐ, ಎಐಜಿ ಮತ್ತು ಐಬಿಎಂಗಳಲ್ಲಿ ಕೆಲಸ ಮಾಡಿದ್ದು ತಂತ್ರಜ್ಞಾನ ಮತ್ತು ಸಾರ್ವಜನಿಕ ಕ್ಷೇತ್ರದ ಸಂಬಂಧದ ಕೌಶಲ್ಯಗಳನ್ನು ಮೈಗೂಡಿಸಿಕೊಂಡಿದ್ದು ಭಾರತದಲ್ಲಿ ಆರಿಗೊನ ನೂತನ ಉಪಕ್ರಮದ ನೇತೃತ್ವ ವಹಿಸಲು ಸೂಕ್ತರಾಗಿದ್ದಾರೆ.

ಆರಿಗೋ ಸಾಫ್ಟ್‌ವೇರ್ ಟೆಕ್ನಾಲಜೀಸ್‌ನ ಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಾಲಾಜಿ ಶ್ರೀನಿವಾಸನ್ ಅವರು ಮಾತನಾಡಿ, ಮೂಲ ಸೌಕರ್ಯಗಳ ಕ್ಷೇತ್ರದಲ್ಲಿ ಮುಖ್ಯವಾಗಿ ಭಾರತ ಅಪಾರ ವೇಗದ ಬೆಳವಣಿಗೆ ಕಾಣುತ್ತಿದೆ. ರಸ್ತೆಗಳು, ವಿಮಾನ ನಿಲ್ದಾಣಗಳು, ಬಂದರುಗಳು ಮತ್ತು ವಿದ್ಯುತ್ ಘಟಕಗಳು ಕ್ಷಿಪ್ರಗತಿಯಲ್ಲಿ ನಿರ್ಮಾಣವಾಗುತ್ತಿವೆ. ಭಾರತ ಸರ್ಕಾರ ಶೇ. 46ರಷ್ಟು ಆಯವ್ಯಯದ ಮೊತ್ತವನ್ನು (2010–11ರ ಹಣಕಾಸು ವರ್ಷ) ಮೂಲಸೌಕರ್ಯಕ್ಕೆ ಮೀಸಲಿಟ್ಟಿದ್ದು ಈ ಮೊತ್ತ 1,735 ಶತಕೋಟಿ ರೂ.ಗಳಾಗಿದೆ. ಭಾರತ ತನ್ನ ಮೂಲ ಸೌಕರ್ಯ ನಿರ್ಮಿಸಿ ಅಭಿವೃದ್ಧಿಶೀಲ ರಾಷ್ಟ್ರವಾಗುವತ್ತ ಗಮನಹರಿಸಿದ್ದು ಈ ಸಂಖ್ಯೆ ಮುಂದಿನ 8–10 ವರ್ಷಗಳಲ್ಲಿ ಮತ್ತಷ್ಟು ಬೆಳೆಯಲಿದೆ. ಈಗ ನಾವು ಭಾರತದಲ್ಲಿ ಪ್ರತ್ಯೇಕವಾದ ಸ್ಥಾಪಿತ ಸಾರ್ವಜನಿಕ ಕ್ಷೇತ್ರದ ವ್ಯವಹಾರವನ್ನು ಹೊಂದಿದ್ದು ಮೂಲಸೌಕರ್ಯ ಯೋಜನೆಗಳ ಹೆಚ್ಚಿನ ನಿಯಂತ್ರಣವನ್ನು ನಿಖರವಾದ ಮಾಹಿತಿ ಮತ್ತು ತಕ್ಷಣದ ಕ್ರಮಗಳಿಂದ ಕೈಗೊಳ್ಳುವ ಕಡೆಗೆ ಗಮನಹರಿಸಬೇಕಾದ ಅಗತ್ಯವಿದೆ ಎಂದರು.

ಭಾರತದಲ್ಲಿ ಮೂಲಸೌಕರ್ಯ ಯೋಜನೆಗಳು ಈಗ ಉತ್ತಮ ಹಂತ ತಲುಪಿದ್ದು ಯೋಜನೆಗಳ ದೃಶ್ಯಸಾಧ್ಯತೆ ಹೆಚ್ಚಿಸಲು ಉತ್ತಮವಾದ ಕಾರ್ಯನಿರ್ವಾಹಕ ನಿರ್ಣಯದ ಅಗತ್ಯವಿದ್ದು ಡಿಜಿಟಲ್ ಡಾಟಾರೊಂದಿಗೆ ತಕ್ಷಣದ ವರದಿ ಪೂರೈಕೆಯ ಅಗತ್ಯವೂ ಇರುತ್ತದೆ. ಯೋಜನೆಗಳನ್ನು ಲಾಭಾರ್ಹವಾಗಿಸಲು ಜೊತೆಗೆ ಅತ್ಯುನ್ನತ ಗುಣಮಟ್ಟದೊಂದಿಗೆ ಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಪರಿಣಾಮಕಾರಿ ವೆಚ್ಚದೊಳಗೆ ಮುಗಿಸಲು ಈ ಕೆಲವು ಕ್ರಮಗಳು ಅಗತ್ಯವಿರುತ್ತವೆ ಎಂದರು.

ಆರಿಗೊ ಅಮೇರಿಕಾದ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳೊಂದಿಗೆ ಉತ್ತಮ ಅನುಭವ ಹೊಂದಿದೆ. ಕ12 ಶೈಕ್ಷಣಿಕ ಸಂಸ್ಥೆಗಳು, ಸಾರ್ವಜನಿಕ ಸಾರಿಗೆ ಪ್ರಾಧಿಕಾರ ಮುಂತಾದ ಸಂಸ್ಥೆಗಳು ಇದರಲ್ಲಿ ಸೇರಿವೆ. ಭಾರತ ಮತ್ತು ಮಧ್ಯಪೂರ್ವ ಮಾರುಕಟ್ಟೆಗಳನ್ನು 2008ರಲ್ಲಿ ಪ್ರವೇಶಿಸಿದ ಆರಿಗೊನ ಉತ್ಪನ್ನ ಮತ್ತು ಸೇವೆಗಳನ್ನು ಖಾಸಗಿ ಕ್ಷೇತ್ರ ಮತ್ತು ಮೂಲ ಸೌಕರ್ಯ ಸಂಸ್ಥೆಗಳಿಂದ ಉತ್ತಮ ರೀತಿಯಲ್ಲಿ ಸ್ವೀಕರಿಸಲಾಗಿದೆ. ಈ ಸಂಸ್ಥೆಗಳಲ್ಲಿ ಎನ್‌ಸಿಸಿ ಇಂಟರ್‌ನ್ಯಾಷನಲ್, ಅಲ್ ಸುಬ್ಹೈ, ಯೂನಿಟಿ ಇನ್ಫ್ರಾ ಪ್ರೋಜೆಕ್ಟ್ಸ್, ಸುಪ್ರೀಮ್ ಇನ್ಫ್ರಾ, ಆರ್‌ಡಿಎಸ್ ಪ್ರೋಜೆಕ್ಟ್ಸ್, ನವೀನ್ ಹೌಸಿಂಗ್, ಎಸ್‌ಎನ್‌ಸಿ ಪವರ್ ಕಾರ್ಪೊರೇಷನ್ ಮುಂತಾದವು ಸೇರಿವೆ.

ಆರಿಗೋ ಸಾಫ್ಟ್‌ವೇರ್ ಕುರಿತು: ಮೂಲಸೌಕರ್ಯ ಸಂಸ್ಥೆಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು, ಸಾಮಾನ್ಯ ಗುತ್ತಿಗೆದಾರರು, ಪಿಎಂಸಿ ಸಂಸ್ಥೆಗಳು ಮತ್ತು ಬಂದರುಗಳಿಗೆ ವಿಶ್ವವ್ಯಾಪಿಯಾಗಿ ಕ್ಯಾಪಿಟಲ್ ಪ್ರಾಜೆಕ್ಟ್ ಮತ್ತು ಪ್ರೋಗ್ರಾಮ್ ಮ್ಯಾನೇಜ್‌ಮೆಂಟ್(ಸಿಪಿಎಂಎಸ್)ಗಾಗಿ ಪರಿಹಾರಗಳನ್ನು ಪೂರೈಸುತ್ತಿರುವ ಜಾಗತಿಕ ಮುಂಚೂಣಿಯ ಸಾಫ್ಟ್‌ವೇರ್ ಉತ್ಪನ್ನ ಸಂಸ್ಥೆಯಾದ ಆರಿಗೊ ಸಾಫ್ಟ್‌ವೇರ್ ನ್ಯೂಯಾರ್ಕ್‌ನಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ಅಮೆರಿಕಾ, ಮಧ್ಯಪೂರ್ವ ಮತ್ತು ಭಾರತಗಳಲ್ಲಿ ಕಚೇರಿಗಳನ್ನು ಹೊಂದಿದೆ. ಸಂಸ್ಥೆ ಕುರಿತು ಹೆಚ್ಚಿನ ವಿವರಗಳಿಗೆ ತಿತಿತಿ.ಚಣಡುರಠ.ಛಿಂಟ ರಲ್ಲಿ ಸಂದರ್ಶಿಸಿ.